# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **766 (860)**

ಸದಸ್ಯರ ಹೆಸರು : **ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ)**

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : **24.07.2024**

| | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಆಪ್ ಆಧಾರಿತ ಟ್ಯಾಕ್ಸಿ ಸೇವೆ ಒದಗಿಸುತ್ತಿರುವ ಕಂಪನಿಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು? | ರಾಜ್ಯದಲ್ಲಿ Karnataka On Demand Transportation Technology Aggregator Rules 2016 ರ ಅಡಿಯಲ್ಲಿ ಸಾರಿಗೆ ಇಲಾಖೆಯಿಂದಆಪ್ ಆಧಾರಿತ ಟ್ಯಾಕ್ಸಿ ಸೇವೆ ಒದಗಿಸುತ್ತಿರುವ ಕಂಪನಿಗಳಿಗೆ 20 ಲೈಸೆನ್ಸ್ ಗಳನ್ನು ನೀಡಲಾಗಿರುತ್ತದೆ. ಸದರಿ ಕಂಪನಿಗಳ ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಆ. | ಸರ್ಕಾರವು 'ಒನ್ ಸಿಟಿ ಒನ್ ರೇಟ್' ಕಲ್ಪನೆಯಡಿಯಲ್ಲಿ ದರ ನಿಗದಿ ಮಾಡಿದೆಯೇ; ಮಾಡಿದ್ದಲ್ಲಿ, ಯಾವ ದಿನಾಂಕದಿಂದ ಮಾಡಲಾಗಿದೆ. | ಹೌದು, ಸರ್ಕಾರದ ಅಧಿಸೂಚನೆ ಸಂಖ್ಯೆ ಟಿಡಿ 68 ಟಿಡಿಒ 2019 ದಿನಾಂಕ: 03-02-2024ರಲ್ಲಿ ಕರ್ನಾಟಕ ರಾಜ್ಯದಲ್ಲಿ (ಬೆಂಗಳೂರು ನಗರ ವ್ಯಾಪ್ತಿಯನ್ನು ಸಹ ಒಳಗೊಂಡಂತೆ) ಆಚರಣೆ ಮಾಡುವ ಎಲ್ಲಾ ಟ್ಯಾಕ್ಸಿ, ಸಿಟಿ ಟ್ಯಾಕ್ಸಿ, ಇನ್ನಿತರೆ ಟ್ಯಾಕ್ಸಿ (ಮೋಟಾರ್ ಕ್ಯಾಬ್) ಗಳ ಹಾಗೂ ಅಗ್ರಿಗೇಟರ್ಸ್ ನಿಯಮಗಳಡಿ ಕಾರ್ಯಾಚರಿ ಸುತ್ತಿರುವ ವಿವಿಧ ಮಾದರಿಯ ಟ್ಯಾಕ್ಸಿಗಳ ಪ್ರಯಾಣ ದರ ಮತ್ತು ಸಾಗಾಣಿಕೆ ದರಗಳನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ದರವು ದಿನಾಂಕ: 03-02-2024ರಿಂದ ಜಾರಿಯಲ್ಲಿರುತ್ತದೆ. |
| ಇ. | ಸರ್ಕಾರವು ದರ ನಿಗದಿ ಮಾಡಿದ್ದರೂ ಸಹ ಅಗ್ರಿಗೇಟರ್ ಕಂಪನಿಗಳು 'ಬೇಡಿಕೆ ದರ' ಹೆಸರಿನಲ್ಲಿ ಬುಕ್ಕಿಂಗ್ ಹೆಚ್ಚು ಇರುವಾಗ, ಮಳೆ ಬರುತ್ತಿರುವ ಸಮಯದಲ್ಲಿ ಪ್ರಯಾಣಿಕರಿಂದ ಹೆಚ್ಚಿನ ದರ ಸುಲಿಗೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇವರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು; | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಸರ್ಕಾರವು, ವಿಶೇಷ ತನಿಖಾ ತಂಡಗಳ ಮೂಲಕ ನಿಗದಿಪಡಿಸಿರುವ ಪ್ರಯಾಣ ದರ ಮತ್ತು ಸಾಗಾಣಿಕೆ ದರಗಳಿಗಿಂತ ಹೆಚ್ಚಿನ ದರ ವಸೂಲಿ ಮಾಡುವವರ ವಿರುದ್ಧ ಕಾಲಕಾಲಕ್ಕೆ ಮೋಟಾರು ವಾಹನ ಕಾಯ್ದೆ 1988 ಮತ್ತು ಅದರಡಿ ರಚಿತವಾದ ನಿಯಮಗಳನ್ವಯ ಕ್ರಮ ಜರುಗಿಸುತ್ತಿದೆ. |
| ಈ. | ಟೋಲ್ ಶುಲ್ಕವನ್ನು ಪಾವತಿಸ ಬೇಕಾದವರು ಯಾರು; | ಸರ್ಕಾರದ ಅಧಿಸೂಚನೆ ಸಂಖ್ಯೆ ಟಿಡಿ 68 ಟಿಡಿಒ 2019 ದಿನಾಂಕ:03-02-2024ರಲ್ಲಿನ ಷರತ್ತಿನ ಕ್ರಮ ಸಂಖ್ಯೆ 4 ರಲ್ಲಿ ಸಿಟಿ ಟ್ಯಾಕ್ಸಿಯವರು / ಪ್ರವರ್ತಕರು, ಅಗ್ರಿಗೇಟರ್‌ಗಳು ಅನ್ವಯವಾಗುವ ಜಿ.ಎಸ್.ಟಿ ಮತ್ತು ಟೋಲ್ ಶುಲ್ಕವನ್ನು ಪ್ರಯಾಣಿಕರಿಂದ ವಸೂಲಿ ಮಾಡಬಹುದಾಗಿರುತ್ತದೆ. |
| ಉ. | ಪ್ರಯಾಣಿಕರಿಂದ ವಸೂಲಿ ಮಾಡಿದ ಹೆಚ್ಚಿನ ದರವನ್ನು ಯಾರಿಗೆ ನೀಡಲಾಗುತ್ತದೆ; ಅಥವಾ ಯಾವ ಉದ್ದೇಶಕ್ಕೆ ಅಗ್ರಿಗೇಟರ್ ಕಂಪನಿಗಳು ಬಳಸುತ್ತವೆ; | ನಿಗದಿತ ದರಗಳಿಗಿಂತ ಹೆಚ್ಚಿನ ದರಗಳನ್ನು ಅಗ್ರಿಗೇಟರ್ ಕಂಪನಿಗಳು ಪ್ರಯಾಣಿಕರಿಂದ ವಸೂಲಿ ಮಾಡಲು ಅವಕಾಶವಿರುವುದಿಲ್ಲ. ಒಂದು ವೇಳೆ ಮಾಡಿದಲ್ಲಿ ಅಂತಹವರ ವಿರುದ್ಧ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುತ್ತದೆ. |

| | ಪ್ರಶ್ನೆ | ಉತ್ತರ |
|---|---|---|
| ಊ. | ಪ್ರಯಾಣಿಕರಿಂದ ಬೇಡಿಕೆ ಆಧಾರದ ಮೇಲೆ, ಸಮಯದ ಆಧಾರದ ಮೇಲೆ ಅಥವಾ ತಲುಪಬೇಕಾದ ಸ್ಥಳದ ಆಧಾರದ ಮೇಲೆ ದರ ಪಡೆಯುತ್ತಿದ್ದಲ್ಲಿ ಅಂತಹ ಅಗ್ರಿಗೇಟರ್ ಕಂಪನಿಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು? | ಸಾರಿಗೆ ಇಲಾಖೆಯಿಂದ ನಿರಂತರ ಪ್ರವರ್ತನ ಚಟುವಟಿಕೆಗಳೊಂದಿಗೆ ಹಾಗೂ ಕಾಲಕಾಲಕ್ಕೆ ವಿಶೇಷ ತನಿಖಾ ತಂಡಗಳ ಮೂಲಕ ಕರ್ನಾಟಕ ಆನ್ ಡಿಮ್ಯಾಂಡ್ ಟ್ರಾನ್ಸ್‌ಪೋರ್ಟೇಷನ್ ಟೆಕ್ನಾಲಜಿ ನಿಯಮಗಳು 2016ರಲ್ಲಿ ನಿಗದಿಪಡಿಸಿರುವ ಮಾನದಂಡನೆಗಳು ಹಾಗೂ ಸರ್ಕಾರದಿಂದ ನಿಗದಿಪಡಿಸಿರುವ ದರಗಳಿಗಿಂತ ಹೆಚ್ಚಿನ ದರ ವಸೂಲಿಸುವವರ ವಿರುದ್ಧ ಮೋಟಾರು ವಾಹನ ಕಾಯ್ದೆ 1988 ಮತ್ತು ಅದರಡಿ ರಚಿತವಾದ ನಿಯಮಗಳನ್ವಯ ಕ್ರಮ ಜರುಗಿಸಲಾಗುತ್ತದೆ.<br><br>ಮುಂದುವರೆದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು WA.No.4787/2016, WA.No.4789/2016, WP.No.6421/2022 WP.No.19869/2021 & WP. No. 14627/2021 ಪ್ರಕರಣಗಳಲ್ಲಿ OLA, UBER & RAPIDO ಅಂತಹ ಅಗ್ರಿಗೇಟರ್ ಕಂಪನಿಗಳ ಕ್ಯಾಬ್ ಮತ್ತು ಬೈಕ್ ಟ್ಯಾಕ್ಸಿಗಳ ಆಚರಣೆಗೆ ಸಂಬಂಧಿಸಿದಂತೆ the authorities shall not take any coercive action ಎಂದು ಮಧ್ಯಂತರ ಆದೇಶವನ್ನು ಹೊರಡಿಸಿದ್ದು, ಪ್ರಕಣರವು ಗೌ. ಉಚ್ಚ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ. |

**ಟಿಡಿ 28 ಟಿಡಿಕ್ಯೂ 2024**

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.

# STATEMENT OF AGGREGATOR LICENCE ISSUED

ಅನುಬಂಧ

| Sl.No. | Licence Holder Name & Address |
|---|---|
| 1 | M/S ANI Technologies Pvt Ltd., (OLA) |
| 2 | M/S Uber India Pvt Ltd., |
| 3 | M/S Utoo Cabs (Kar) Pvt Ltd., |
| 4 | M/S Lets Cabs Pvt Ltd., (Mexo) |
| 5 | M/S Opta Cabs Pvt Ltd., |
| 6 | M/S V.Link Automotive Services Pvt Ltd. |
| 7 | M/S Pepride Travel Solutions Pvt Ltd. |
| 8 | M/S Kou-Chan Technologies Pvt Ltd. |
| 9 | M/S Malbork Technologies Pvt Ltd., |
| 10 | M/S Hoysala Cabs India Pvt Ltd., |
| 11 | M/S Kratzen Technologies Pvt Ltd., |
| 12 | M/S iDisha Info Labs Pvt Ltd., |
| 13 | M/S SKSS Technologies Pvt Ltd (Shyft). |
| 14 | M/S DANEXTREAME SOLUTIONS PVT LTD., |
| 15 | M/S BYTWO Technologies Pvt Ltd., |
| 16 | M/S BLU Smart Mobility Tech Pvt Ltd., |
| 17 | M/S Drife Technologies Pvt Ltd., |
| 18 | M/S J2J Complete Solutions LLP., |
| 19 | M/S VTT Transport Solutions Pvt Ltd., |
| 20 | M/S FUZE Technology Pvt Ltd. |